ಐದು ಆರನೆಯ ವಯಸ್ಸಿನಿಂದಲೇ ನಾನು ಕಥೆ ಕೇಳಲು ಆರಂಭಿಸಿದೆ. ಆ ಕಾಲದಲ್ಲಿ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದ ನನ್ನ ತಂದೆ ರಾಮಾಯಣ, ಮಹಾಭಾರತ, ಭಾಗವತ, ತೆನಾಲಿ ರಾಮಕೃಷ್ಣ, ಅಕ್ಬರ್ ಬೀರ್‌ಬಲ್, ಬೇತಾಳ ಪಂಚವಿಂಶತಿ, ಪಂಚತಂತ್ರ ಮತ್ತು ಜಾನಪದ ಕಥೆಗಳನ್ನು ನನಗೆ ಹೇಳುತ್ತಿದ್ದರು. ಏಕಸಂಧಿಗ್ರಾಹಿಯಂತೆ ನಾನು ಅವುಗಳನ್ನು ಸಹಪಾಠಿಗಳ ಮುಂದೆ, ಶಾಲೆಯಲ್ಲಿ ಪುನರಾವರ್ತನೆ ಮಾಡುತ್ತಿದ್ದೆ. ಹೀಗೆ ಕಥೆಗಳನ್ನು ಕುರಿತ ಆಕರ್ಷಣೆ ಬಾಲ್ಯದಿಂದಲೇ ನನ್ನಲ್ಲಿ ಆರಂಭವಾಯಿತೆನ್ನಬಹುದು. ಹದಿನೈದನೇ ವಯಸ್ಸಿನಿಂದ ಕಥೆ ಬರೆಯಲು ಆರಂಭಿಸಿದೆ. ಮೊದಲ ಐವತ್ತು ಕಥೆಗಳು ಅಭ್ಯಾಸಕ್ಕೆಂದು ಬರೆದವು. ಅವನ್ನು ಎಲ್ಲೂ ಪ್ರಕಟಿಸಲಿಲ್ಲ. ನನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ನನ್ನ ಮೊದಲನೆಯ ಕಥೆ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ಅಲ್ಲಿಂದ ಈ ಐವತ್ತು ವರ್ಷಗಳಲ್ಲಿ ಸುಮಾರು ಇನ್ನೂರು ಕಥೆಗಳು ಪ್ರಕಟವಾಗಿದ್ದರೂ ಪುಸ್ತಕರೂಪದಲ್ಲಿ ಆರು ಸಂಕಲನಗಳಲ್ಲಿ 77 ಕಥೆಗಳಷ್ಟೇ ಸೇರಿವೆ. ಇನ್ನೊಂದು ಸಂಕಲನವನ್ನು ಪ್ರಕಟಿಸುವ ಸಿದ್ಧತೆಯಲ್ಲಿದ್ದೇನೆ. ಈ ಹಂತದಲ್ಲಿ 'ಸುಧಾ', 'ಮಯೂರ', 'ಪ್ರಜಾವಾಣಿ' ಪತ್ರಿಕೆಗಳು ನೀಡಿದ ಉತ್ತೇಜನವನ್ನು ಮನಸಾರೆ ನೆನೆಯುತ್ತೇನೆ.

ಕಥೆ ಬರೆಯುವ ಪ್ರಕ್ರಿಯೆ ಎಷ್ಟರಮಟ್ಟಿಗೆ ಪ್ರಜ್ಞಾಪೂರ್ವಕ ಎಂದು ಯೋಚಿಸುವಾಗ ಅನೇಕ ಅಮೂರ್ತ ಚಿತ್ರಗಳು ಸ್ಫುಟಗೊಳ್ಳುತ್ತವೆ. ಕಥೆಗಾರ ಕೆರೆಯ ದಂಡೆಯಲ್ಲಿ ಗಾಳಹಾಕಿ ಕುಳಿತ ಬೆಸ್ತನ ಹಾಗೆ. ನೀರಿನಾಳದಲ್ಲಿ ಮೀನು ಯಾವಾಗ ಎರೆಯನ್ನು ಕಚ್ಚುತ್ತದೆಯೋ, ಯಾವಾಗ ಬೆಸ್ತ ಗಾಳವನ್ನು ಛಂಗನೆ ಮೇಲಕ್ಕೆ ಎತ್ತುತ್ತಾನೋ ಹೇಳಲಾಗುವುದಿಲ್ಲ. ಒಂದೇ ಕ್ಷಣದಲ್ಲಿ ಬಿಸಿಲಿನಲ್ಲಿ ಥಳಥಳಿಸುವ ಮೀನು ಬುಟ್ಟಿಗೆ ಬಿದ್ದಿರುತ್ತದೆ. ಅಥವಾ ಕಲ್ಪನೆಯೆನ್ನುವುದು ಗಣಿಯಾಳದಲ್ಲಿ ಮಿನುಗುವ ಚಿನ್ನದ ಗೆರೆ ಎನ್ನಬಹುದು. ಅದಿರು ತೆಗೆದು ಚೊಕ್ಕ ಚಿನ್ನವನ್ನು ಪ್ರತ್ಯೇಕಿಸಿ, ಒಡವೆಯನ್ನೋ ವಿಗ್ರಹವನ್ನೋ ಮಾಡುವುದು ಕುಶಲ ಕರ್ಮಿಗೆ ಕಷ್ಟವಾಗಲಾರದು. ಆದರೆ ಚಿನ್ನದ ಗೆರೆ ಗೋಚರಿಸುವುದೇ ಕಷ್ಟ. ಹೊಳೆದ ವಸ್ತು ಮನಸ್ಸಿನಲ್ಲಿಯೇ ಬೆಳೆಯುತ್ತಾ ಹೋಗುತ್ತದೆ. ಅದನ್ನು ಕುರಿತು ಯೋಚಿಸುತ್ತಾ ಹೋಗಬೇಕೆಂಬುದಿಲ್ಲ. ತನ್ನಷ್ಟಕ್ಕೆ ರೆಕ್ಕೆಪುಕ್ಕ ಬೆಳೆಸಿಕೊಳ್ಳುತ್ತದೆ. ಯಾವಾಗಲೋ ಮೊಟ್ಟೆಯೊಡೆದು ಅಸ್ಥಿರ ಹೆಜ್ಜೆಗಳನ್ನಿಡುತ್ತಾ ಜಗತ್ತಿನಲ್ಲಿ ಕಣ್ಣುಬಿಡುತ್ತದೆ. ಇದು ದಾರಿಯಲ್ಲಿ ಸಿಕ್ಕಿದ ಕುದುರೆ ಲಾಳವನ್ನು ಹಿಡಿದುಕೊಂಡು ಇಡೀ ಗಾಡಿಯನ್ನೇ ಕಲ್ಪಿಸಿಕೊಂಡ ಹಾಗೆ. ಯಾರೋ ರಾಜಕುಮಾರ ಒಂದು ಕೂದಲೆಳೆಯನ್ನು ಹಿಡಿದುಕೊಂಡು ಒಬ್ಬಳು ಸುಂದರವಾದ ರಾಜಕುಮಾರಿಯನ್ನು ಕಲ್ಪಿಸಿಕೊಂಡನಂತೆ– ಒಂದು ಜಾನಪದ ಕಥೆಯಲ್ಲಿ. ನನ್ನ ಮಟ್ಟಿಗೆ ಕಥೆ ಬೆಳೆಯುವುದು ಮನಸ್ಸಿನಲ್ಲೇ. ಅದೃಶ್ಯ ಲೇಖನಿಯೊಂದು ಮನಸ್ಸಿನ ಪುಟದಲ್ಲಿ ಆ ಕಥೆಯನ್ನು ಬಹುತೇಕ ಇಡಿಯಾಗಿಯೇ ಬರೆಯುತ್ತದೆ. ಅದೇ ಗುಂಗಿನಲ್ಲೇ ಕಾಗದದ ಮೇಲೆ ಅಕ್ಷರ ರೂಪದಲ್ಲಿ ಇಳಿಯುವ ಕ್ರಿಯೆಯಲ್ಲಿ ಇನ್ನೂ ಅನೇಕ ಅಲಂಕರಣಗಳು ಸೇರುತ್ತಾ ಹೋಗುತ್ತವೆ. ಬರೆಯುತ್ತಾ ಬರೆಯುತ್ತಾ ಕಥೆ ಇನ್ನಷ್ಟು ಬೆಳೆಯುತ್ತದೆ. ಒಂದು ಸಲ ಕಥೆ ಬರೆದ ಮೇಲೆ ಹೆಚ್ಚಿನ ಬದಲಾವಣೆಗಳಿಗೆ ಈಡಾಗುವುದಿಲ್ಲ. ಎಷ್ಟೋ ವರ್ಷ ನಾವು ಮೂವರು ಸ್ನೇಹಿತರು ('ಚಿರಂಜೀವಿ', ಎಂ.ಕೆ. ಗೋಪಿನಾಥ್ ಮತ್ತು ನಾನು) ಲಾಲ್‌ಬಾಗ್ ಅಥವಾ ಕಬ್ಬನ್‌ಪಾರ್ಕ್‌ನಲ್ಲಿ ತಿಂಗಳಿಗೊಮ್ಮೆ ಸೇರಿ ನಮ್ಮ ಹೊಸ ಕಥೆಗಳನ್ನು ಚರ್ಚಿಸುತ್ತಿದ್ದೆವು. ಈ ಚರ್ಚೆಗಳು ನನ್ನ ಕಥೆಗಳನ್ನು ಸುಧಾರಿಸಲು ಎಷ್ಟೋ ಸಹಾಯ ಮಾಡಿದ್ದುಂಟು. ಜಗತ್ತಿನ ಶ್ರೇಷ್ಠ ಕಥೆಗಾರರ ಕಥೆಗಳ ಅಧ್ಯಯನ ಹೊಸ ಒಳನೋಟಗಳನ್ನು ಒದಗಿಸುತ್ತದೆ. ಕಲಿಯುವುದಕ್ಕೆ